ಬಹಳ ದುಸ್ತರವಾದುದು. ಇಬ್ಬರೂ ಪೋಷಕರು ದುಡಿಯಲು ತೆರಳುವುದು, ಸಾಮಾಜಿಕ ಜಾಲತಾಣಗಳ ತೊಡಕುಗಳು, ವ್ಯಕ್ತಿ ಜೀವನದಲ್ಲಿ ವಿಪರೀತ ಚಟುವಟಿಕೆಗಳು ಮತ್ತು ಶಾಲೆಯಲ್ಲಿ ಇತರ ಮಕ್ಕಳಿಂದ ಬೆದರಿಕೆ ಎದುರಾಗುವುದು, ಅಲ್ಲಿನ ಸುರಕ್ಷತೆ... ಹೀಗೆ ಪೋಷಕರನ್ನು ಕಾಡುವ ಸಂಗತಿಗಳ ಪಟ್ಟಿ ದೀರ್ಘವಾಗುತ್ತದೆ.

ಎರಡು ಮೂರು ದಶಕಗಳ ಹಿಂದೆ ಪಾಲನೆ ಪೋಷಣೆ ಎನ್ನುವುದು ಸವಾಲಿನ ಸಂಗತಿಯಾಗಿ ಇರಲಿಲ್ಲ. ಮಾವಿನ ಮರಕ್ಕೆ ಕಲ್ಲೆಸೆಯುತ್ತ ಮಾವಿನ ಕಾಯಿಗಳ ತೊಟ್ಟನ್ನು ರಸ್ತೆಗೆ ಉಜ್ಜಿ, ಕಲ್ಲೊಂದರಲ್ಲಿ ಅದನ್ನು ಚಚ್ಚಿ ಸ್ನೇಹಿತರು ಪಾಲು ಮಾಡಿಕೊಂಡು ಮೆಲ್ಲುತ್ತ ಶಾಲೆಗೆ ತಲುಪುವಷ್ಟು ಆರಾಮವಾದ ಸಮಾಜವು ಇಂದು ಉಳಿದುಕೊಂಡಿಲ್ಲ. ಸ್ಕೂಲ್ ವ್ಯಾನ್‌ನ ಹಂಗು ಬೇಡ, ಮಗು ನಡೆದುಕೊಂಡು ಶಾಲೆಗೆ ಹೋದರೆ ಆರೋಗ್ಯಕ್ಕೆ ಒಳ್ಳೆಯದು ಎನ್ನುವ ಆದರ್ಶವನ್ನು ಕಾರ್ಯರೂಪಕ್ಕೆ ತರುವ ಸ್ಥಿತಿ ಈಗ ಉಳಿದಿಲ್ಲ. ಮಗು ನಡೆಯುವುದಕ್ಕೆ ರಸ್ತೆಯಂಚಿನಲ್ಲಿ ಸುರಕ್ಷಿತವಾದ ಒಂದಿಷ್ಟು ಜಾಗವಾದರೂ ಇದೆಯೇ? ಹೀಗಿರುವಾಗ, ಪ್ರವಾಹದ ವಿರುದ್ಧ ಈಜುವುದು ಸಲ್ಲದ ಮಾತು. ಎಲ್ಲ ಮಕ್ಕಳನ್ನು ಎಲ್ಲರೂ ಹೇಗೆ ಬೆಳೆಸುತ್ತಾರೋ, ಹಾಗೆಯೇ ನಾವು ಬೆಳೆಸಬೇಕಾಗಿದೆ. ಅಂದರೆ, ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ಮಕ್ಕಳಿಗೆ ಓಡುವುದಕ್ಕೆ ಹೇಳಿಕೊಡುವುದು ಅನಿವಾರ್ಯವಾಗಿದೆ ಎಂದು ವಾಸ್ತವವನ್ನು ಬಿಚ್ಚಿಡುತ್ತಾರೆ ಹೊಸ ಜಮಾನಾದ ಪೋಷಕರು.

‘ಬ್ಯುಸಿನೆಸ್ ಪರ್ಫಾರ್ಮೆನ್ಸ್ ಇನ್ನೊವೇಶನ್ ನೆಟ್‌ವರ್ಕ್’ ಸಮೀಕ್ಷೆಯಲ್ಲಿ ಭಾಗವಹಿಸಿದವರ ಪೈಕಿ ಶೇ. 64ರಷ್ಟು ಮಂದಿ ‘ತಾವು ಪೋಷಕರ ಜವಾಬ್ದಾರಿ ನಿರ್ವಹಿಸಿ ಹೈರಾಣಾಗಿಬಿಟ್ಟಿದ್ದೇವೆ’ ಎಂದು ನಿಟ್ಟುಸಿರುಬಿಟ್ಟಿದ್ದಾರೆ. ಮೂರು ವರ್ಷದೊಳಗಿನ ಮಕ್ಕಳ ಪೋಷಕರು ವೃತ್ತಿ, ಸಂಪಾದನೆ ಮತ್ತು ಪಾಲನೆಯ ಒತ್ತಡದಿಂದ ಹತಾಶರಾಗಿ ಕುಸಿದಾಗ ಅವರಿಗೆ ಯಾವುದೇ ಆಸರೆ ದೊರೆಯುವುದಿಲ್ಲ ಎಂದು ಹೇಳಿದ್ದಾರೆ. ಇದ್ದುದರಲ್ಲಿ ಮಗುವಿನ ಅಮ್ಮನಿಗೆ ಆಕೆಯ ಅಮ್ಮನಿಂದ ತುಸು ಆಸರೆ ದೊರೆಯಬಹುದೇನೋ. ಆದರೆ ಅಪ್ಪನಿಂದ ನೆರವು ದೊರೆಯುವುದು ಬಹಳ ಅಪರೂಪ ಎನ್ನುವುದು ಎಲ್ಲ ಅಮ್ಮಂದಿರ ಅಂಬೋಣ. ಹೀಗಿರುವಾಗ, ಎರಡು ಅಥವಾ ಮೂರು ಮಕ್ಕಳನ್ನು ಪಡೆಯುವ ಗೊಡವೆಯೇ ಬೇಡ ಎಂದು ಸುಮ್ಮನಾಗುವುದರ ಹೊರತು ಬೇರೆ ದಾರಿ ಏನಿದೆ?

## ಸಾಲು ಸಾಲು ನಿರೀಕ್ಷೆಗಳು

ಪಾಲನೆ ಪೋಷಣೆಗೆ ಸಂಬಂಧಿಸಿದಂತೆ ನಿರೀಕ್ಷೆ ಮತ್ತು ವಾಸ್ತವದ ನಡುವೆ ಅಗಾಧವಾದ ಅಂತರವಿದೆ. ಈ ಅಂತರವೇ ಸಮಸ್ಯೆಗಳನ್ನು ದ್ವಿಗುಣಗೊಳಿಸಬಹುದು.

ಮನೆಗೆ ಮಗು ಬರಲಿದೆ ಎಂಬ ಸುದ್ದಿ ಖಚಿತವಾಗುತ್ತಿದ್ದಂತೆಯೇ ಮನೆ ಮಂದಿಯ ಮನಸ್ಸಿನಲ್ಲಿ ಸಂತೋಷದ ಮೊಗ್ಗು ಮೂಡುತ್ತದೆ. ಅದರೊಂದಿಗೆ ಬರಲಿರುವ ಮಗುವಿನ ಸ್ವಾಗತಕ್ಕಾಗಿ ತಯಾರಿಗಳು ನಡೆಯುತ್ತವೆ. ಮನೆಗಾಗಿ ನಡೆಯುವ ಪ್ರತಿಯೊಂದು ಖರೀದಿಯಲ್ಲಿಯೂ ಮಗುವಿನ ಹಾಜರಿ ಇರುತ್ತದೆ. ಈ ಕುರ್ಚಿಯು ಮಗುವಿನ ಓಡಾಟಕ್ಕೆ ತೊಂದರೆಯಾದೀತು, ಈ ಮೇಜಿನ ಮೂಲೆಗಳು ಬಹು ಚೂಪಾಗಿವೆ, ವೈರುಗಳು ಮಗುವಿನ ಕೈಗೆಟುಕುವಂತೆ ಇರಬಾರದು, ಜಂಕ್‌ಫುಡ್ ಇನ್ನೆರಡು ವರ್ಷ ಬಂದ್... ಹೀಗೆ ತಯಾರಿಯ ಮಹಾಪೂರವೇ ಮನೆಯಲ್ಲಿರುತ್ತದೆ. ಹಿಂದಿನ ಕಾಲದಲ್ಲಿ ಮಗು ಹುಟ್ಟುವ ಮುನ್ನ ಮಗುವಿಗೆ ಬೇಕಾಗುವ ಬಟ್ಟೆಬರೆ, ಮತ್ತಿತರ ವಸ್ತುಗಳನ್ನು ಖರೀದಿಸುವುದು ಸಲ್ಲದು ಎಂಬ ನಂಬಿಕೆಯಿತ್ತು. ಹುಟ್ಟಿದ ಮಗುವಿಗೆ ಹಳೆಯ ಬಟ್ಟೆಗಳನ್ನು ತೊಡಿಸುವ ರೂಢಿಯಿತ್ತು. ಆದರೆ ಇಂದು, ಅಂತಹ ನಂಬಿಕೆಗಳಿಗೆ ಜಾಗವಿಲ್ಲ. ತೊಟ್ಟಿಲು, ಬಟ್ಟೆಯೊಣಗಿಸುವ ಸ್ಟ್ಯಾಂಡ್, ಪಾತ್ರೆ ಪಗಡಿಗಳು, ಮೃದುವಾದ ಬಟ್ಟೆಗಳು – ಹೀಗೆ ಮಗುವಿನ ಅಗತ್ಯಗಳನ್ನು ಮೊದಲೇ ಊಹಿಸಿ ಸಜ್ಜುಗೊಳಿಸಲಾಗುತ್ತದೆ. ಸ್ವಚ್ಛತೆಯ ಗೀಳು ಅಂಟಿಬಿಡುತ್ತದೆ. ಮಗುವನ್ನು ಸಲಹುವ ವಿಧಾನಗಳ ಕುರಿತು ಪುಸ್ತಕಗಳನ್ನು ಓದಿ ಓದಿ ಗರ್ಭಿಣಿಯು ದಣಿಯುತ್ತಾಳೆ. ಆದರೆ ಹೀಗೆ ಸರ್ವ ಸನ್ನದ್ಧರಾಗಿ ಮಗುವನ್ನು ಸ್ವಾಗತಿಸುವ ಪೋಷಕರು, ಮಗು ನಿಜವಾಗಿಯೂ ಮನೆ ಪ್ರವೇಶಿಸಿದಾಗ ಅದರ ಅಗತ್ಯಗಳು ಬೇರೆಯೇ ಆಗಿರುವುದನ್ನು ಕಂಡು ಕಂಗಾಲಾಗಿಬಿಡುತ್ತಾರೆ.

ನಾನು ಹೀಗೆಯೇ ಮಗುವನ್ನು ಬೆಳೆಸಬೇಕು, ನನ್ನ ಮಗುವಿನ ವ್ಯಕ್ತಿತ್ವ ಹೀಗಾಗಬೇಕು ಎಂದು ಕನಸುಗಳನ್ನು ಕಟ್ಟಿಕೊಳ್ಳುವುದು ಸಹಜ. ಆದರೆ ಆ ಕನಸುಗಳು ನಮ್ಮ ಲೆಕ್ಕಾಚಾರದ ಪ್ರಕಾರ ನನಸಾಗದೇ ಇರಬಹುದು. ಆರೋಗ್ಯ, ವರ್ತನೆ, ಆಶಯ, ಸ್ವಭಾವಗಳಲ್ಲಿ ವ್ಯತ್ಯಾಸವಾದಾಗ ನಮ್ಮ ನಿರೀಕ್ಷೆಯು ನಿಜವಾಗುತ್ತಿಲ್ಲವಲ್ಲ ಎಂಬ ಆತಂಕವು ಹತಾಶೆಯ ಪರಿಸ್ಥಿತಿಯನ್ನು ತಂದೊಡ್ಡುತ್ತದೆ.

